# ಮೈಸೂರ ಗೆಜೆಟ್

ಸರ್ಕಾರದಿಂದ ಶಾಯಿಷ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ|| 12, ಸನೆ 1889.

ಷರಾ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

# ೧ನೇ ಭಾಗ.

## ಇಂಡ್ಯ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು, ವಗೈರೇರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

### ಫೈನಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್ಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ ಕಟ್ಟಡದಲ್ಲಿರುವ ಬ್ಯಾಂಕರ್ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಏರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್ಗಳನ್ನು ಎನ್ಫೇಸ್ಮೆಂಟ ಯಾನೇ ಷರಾ ಬಗ್ಗೆ ಇದರಡಿ ರುಜು ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್ಫೇಸ್ಮೆಂಟ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್ಟ್ರೋಲರ್.

---

### ಫಾರೆಸ್ಟ್ ಇಲಾಖಾ.

ತಾರೀಖು 21ನೇ ಸೆಪ್ಟಂಬರ್ 1889.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲೀಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ಅವುಗಳ ಬಾಜಾದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾಯ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರು ವ ಫಾರೆಸ್ಟ್ ಆಫೀಸರುಗಳಿಂದ ನಡಿಸಲ್ಪಡುವವು.

| | | | |
|---|---|---|---|
| ಶಿವಮೊಗ್ಗಾ ಡಿಸ್ಟ್ರಿಕ್ಟು—ಶಿಕಾರಿಪುರದ ಕೋಠಿ | 11ನೇ ನವಂಬರ್ 1889 | ಹೆಚ್ಚುಕಡಮೆ 300 | ಟನ್‌ಗಳು |
| ಶಿವಮೊಗ್ಗಾ ಡಿಟ್ಟೋ .. | 15ನೇ ಡಿಟ್ಟೋ | .. 350 | ಡಿಟ್ಟೋ |
| ತೀರ್ಥಹಳ್ಳಿ ಡಿಟ್ಟೋ .. | 20ನೇ ಡಿಟ್ಟೋ | .. 120 | ಡಿಟ್ಟೋ |
| ಕಡೂರು ಡಿಸ್ಟ್ರಿಕ್ಟು—ಚಿಕ್ಕಮಗಳೂರು ಕೋಠಿ | 27ನೇ ಡಿಟ್ಟೋ | .. 200 | ಡಿಟ್ಟೋ |
| ಹಾಸನ ಡಿಸ್ಟ್ರಿಕ್ಟು—ಹಾಸನ ಕೋಠಿ .. | 3ನೇ ಡಿಸಂಬರ್ | .. 300 | ಡಿಟ್ಟೋ |
| ಮೈಸೂರು ಡಿಸ್ಟ್ರಿಕ್ಟು—ಶ್ರೀರಂಗಪಟ್ಟಣ ಕೋಠಿ | 9ನೇ ಡಿಟ್ಟೋ | .. 400 | ಡಿಟ್ಟೋ |
| ಹುಣಸೂರು ಡಿಟ್ಟೋ .. | 14ನೇ ಡಿಟ್ಟೋ | .. 600 | ಡಿಟ್ಟೋ |

ಹರಾಜಿನ ಷರತ್ತುಗಳು—1887ನೇ ಇಸವಿ ಆಗಸ್ಟ್ 27 ಮತ್ತು ಸೆಪ್ಟಂಬರ 3ನೇ ಮರ್ಸ್ಯಂಗಳ 34, 35ನೇ ನಂಬರ ಗೆಜೆಟ್‌ಗಳಲ್ಲಿ ಫಾಯಿಷ್ ಮಾಡಲ್ಪಟ್ಟ ಇಸ್ತಿಹಾರಿಗಳನ್ನ ನೋಡಿಕೊಳ್ಳತಕ್ಕದ್ದು. ಮತ್ತು ಸದರೀ ಇಸ್ತಿಹಾರಿಗಳು ಹರಾಜ್ ಕಾಲದಲ್ಲಿ ಓದಲ್ಪಡುವವು.

---

ತಾರೀಖು 21ನೇ ಸೆಪ್ಟಂಬರು 1889.

ಈ ಕೆಳಗೆ ನಮೂದಾಗುವ ಆನೆಗಳು ಮತ್ತು ಹರಾಜ್ ತಾರೀಖುವರೆಗೆ ಹಿಡಿಯಲ್ಪಡುವ ಆನೆಗಳು ಸಹ 1889ನೇ ಇಸವಿ ನವೆಂಬರು ತಾರೀಖು 4ರಲ್ಲು ಮೈಸೂರಿನಿಂದ 30 ಮೈಲಿ ಫಾಸಲೆಯಲ್ಲಿ ಇರುವ ಹೆಗ್ಗಡದೇವನ ಕೋಟೇ ತಾಲ್ಲೂಕು ಹಂಪಾಪುರದ ಮೊಕ್ಕಾಂನಲ್ಲಿ ಫಾರಸ್ಟ್ ಅಸಿಸ್ಟಂಟ್ ಕನ್ಸರ್ವೇಟರವರಿಂದ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.

| ನಂಬರು. | ಹೆಸರು. | ಜಾತಿ. | ಯೆತ್ತರ. | | ಹಿಡಿದ ತಾರೀಖು. | ಷರಾ. |
|---|---|---|---|---|---|---|
| | | | ಅಡಿ | ಅಂಗುಲ | | |
| 1 | ಬಲರಾಮ | ಗಂಡು | 5 | 2 | 88ನೇ ಡಿಕಂಬರ್ ತಾರೀಖು 2 | |
| 2 | ಕ್ರಿಷ್ಣಾ | ಡಿಟೋ | 4 | .. | 22—6—89 | |

ಷರತ್ತುಗಳು—ಸರ್ಕಾರ ಹರಾಜ್ ಕೈದಾದ ಕೂಡ್ಲೆ ಜಡ ದರಖಾಸ್ತುದಾರನು ಹರಾಜ್ ಮೊಬಲಗಿನ ಮೇಲೆ ಸೇಕಡಾ 25 ರೂಪಾಯಿ ಠೇವಣಿಯನ್ನ ಪಾವತಿಮಾಡತಕ್ಕದ್ದು. ಬಾಕಿ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳವೊಳಗಾಗಿ ಪಾವತಿಯಿಂದ ಆನೆಯನ್ನು ತೆಗದುಕೊಂಡು ಹೋಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಠೇವಣಿ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲಾಗುತ್ತೆ. ಮತ್ತು ಸದರೀ ಆನೆಗಳು ಪುನಹಾ ಹರಾಜ್ ಮಾಡುವದರಲ್ಲಿ ಉಂಟಾಗಬಹುದಾದ ಲುಕ್ಸಾನಿಗೆ ಮೊದಲ್ ದರಖಾಸ್ತುದಾರನ್ನ ಗುರಿಮಾಡಲಾಗುತ್ತೆ. ನಫೇ ಬಂದಲ್ಲಿ ದರಖಾಸ್ತುದಾರನಿಗೆ ಕೊಡಲಾಗುವದಿಲ್ಲಾ ದರಖಾಸ್ತುದಾರರು ಅವರು ಪಡಕೊಂಡ ಆನೆಗಳಿಗೆ ಹರಾಜ್ ತಾರೀಖು ಲಾಗಾಯತು ತಗಲುವ ಖರ್ಚು ವಹಿಸಬೇಕು.

ಯಲ್. ರಿಕೆಟ್ಸ್,
ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

---

## ಮೈಸೂರು ಡಿಸ್ಟ್ರಿಕ್ಟು.

### ಮೈಸೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 236.

ಮೃತಪಟ್ಟ ಗೋಳೂರು ಶೇಷಣ್ಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ವೆಂಕಮ್ಮನವರು, ಮೃತಪಟ್ಟ ಸದರೀ ಶೇಷಣ್ಣನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಬಸವನ ಮೊಹಲಾ ಸ್ಥಳದ ಸದರೀ ವೆಂಕಮ್ಮನವರು ಸದರೀ ವಾಸಸ್ಥರಾಗಿ ಮೃತಪಟ್ಟ ಶೇಷಣ್ಣನವರ ಜಿಂದಗಿ ಬಗ್ಯಾಗಿ ಬರತಕ್ಕ 6000 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರೆಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರಳಾದ ವೆಂಕಮ್ಮನವರ ಅರ್ಜಿಯನ್ನು 1889ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟು ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶೇಷಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಸೆಪ್ಟಂಬರ್ ತಿಂಗಳು 28ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಶಿವಾಜಿರಾವ್, ಡಿಸ್ಟ್ರಿಕ್ಟು ಜಡ್ಜ್.

---

ತಾರೀಖು 15ನೇ ಆಗಸ್ಟ್ 1889.

ವಜ್ರದ ಹತ್ತಕಡಕು ಪಲಕೆಲಾಂಬಿ ಅರ್ಧ ಅಂಗುಲ ರುಂದಿ ಸುಮಾರು ಹಾಗೂ ಬ್ಯಾಳೆ ಅಂಗುಲ, ಸುಮಾರು ಬಾದಾಮಿ ಮಾಟ, ಚಿನ್ನದಲ್ಲಿ ಕಟ್ಟಿದೆ, ಚಿನ್ನದ ತಿರುಪು ಸಹವುಳ್ಳ ಸದರೀ ಹತ್ತಕಡಕು ಸನ 1889ನೇ ಇಸವಿ ಆಗಸ್ಟು 11ನೇ ಹಗಲು ಸುಮಾರು 1 ಘಂಟೇ ಹೊತ್ತಿನಲ್ಲಿ ನಂಜನಗೂಡು ಪ್ರಾಂಗೆ ಉತ್ತರ ದಿಕ್ಕಿನಲ್ಲಿರುವ ಸ್ನಾನಘಟ್ಟದ ಬಳಿ ಬಿದ್ದು ಹೋಯಿತು ಈ ಮಾಲು ಯಾರಿಗಾದರೂ ಸಿಕ್ಕಿ ಇದರ ಅಡಿ ರುಜು ಮಾಡಿರುವ ಶೇಷ ಅಸಿಸ್ಟೆಂಟ ಕಮ್ಮಿಷನರ ಶ್ರೀನಿವಾಸಯ್ಯಂಗಾರ್ರಿಗಾಗಲಿ ಸರಕಾರಕ್ಕಾಗಲಿ ತಂದುಕೊಟ್ಟಲ್ಲಿ 50 ರೂಪಾಯಿ ಇನಾಮು ಕೊಡಲ್ಪಡುತ್ತದೆ. ಹತ್ತಕಡಕಿನ ಬೆಲೆ ಸುಮಾರ್ 200 ರೂಪಾಯಿ.

ಎ. ಶ್ರೀನಿವಾಸಯ್ಯಂಗಾರ್,
ಶೇಷ ಅಸಿಸ್ಟೆಂಟ್ ಕಮ್ಮಿಷನರ್.